# ಶಿವ ಹೃದಯವನ್ನು ತೋರಿಸಿದವರು ಕವಿಗಳು

**ಸುತ್ತೂರು, ಆಗಸ್ಟ್-17**: ಓದುಗನಲ್ಲಿ ಜ್ಞಾನ ಹಾಗೂ ಭಕ್ತಿಯನ್ನು ಹೆಚ್ಚಿಸಿ ಆನಂದಮಯವಾದ ಈ ಜಗತ್ತಿನಲ್ಲಿ ಶಿವ ಹೃದಯವನ್ನು ತೋರಿಸಿದವರು ಕವಿಗಳು ಎಂದು ಪ್ರಾಧ್ಯಾಪಕರಾದ ಶ್ರೀ ಹೆಚ್.ಬಿ. ದೇವಣ್ಣನವರು ಆಗಸ್ಟ್ 17ರಂದು ಸುತ್ತೂರು ಶ್ರೀಮಠದಲ್ಲಿ ಶ್ರಾವಣಮಾಸದ 19ನೇ ದಿನದ ಪ್ರವಚನದಲ್ಲಿ ತಿಳಿಸಿದರು.

ಕವಿ ಎಂದರೆ ಕಲ್ಪನಾ ವಿಹಾರಿ. ಮನುಷ್ಯ ಭಾವನೆಗಳನ್ನು ವ್ಯಕ್ತಪಡಿಸುವ ಪರಿಯೇ ಕವಿತ್ವ. ಮನಸ್ಸು ಪ್ರಶಾಂತವಾಗಿರುವಲ್ಲಿ ಸಾಹಿತ್ಯವು ಉತ್ತಮವಾಗಿ ಹೊರಹೊಮ್ಮುತ್ತದೆ. ಕವಿಗಳು ಪ್ರಕೃತಿಯಲ್ಲಿ ದೇವರನ್ನು ಕಂಡವರು. ಸಹೃದಯನ ಮನಸ್ಸನ್ನು ತಮ್ಮ ಕವಿತೆಗಳತ್ತ ಸೆಳೆಯುತ್ತಾರೆ. ವರ್ಡ್ಸ್‌ವರ್ಥ್ ಮತ್ತು ಕುವೆಂಪು ಪ್ರಕೃತಿ ಕವಿಗಳು. ಪ್ರಕೃತಿಯನ್ನು ಆರಾಧಿಸುತ್ತಾ ಪ್ರಕೃತಿಯಲ್ಲೇ ದೈವತ್ವವನ್ನು ಕಂಡವರು. ನಂಬಿದವರಿಗೆ ದೇವರು ಎಲ್ಲ ಕಡೆ ಇರುತ್ತಾನೆ. ದೈವೀಸ್ವರೂಪಿಗಳಾದ ಸೂರ್ಯ-ಚಂದ್ರರು ನಮಗೆ ಕಾಣುತ್ತಾರೆ. ಇವರಿಲ್ಲದಿದ್ದರೆ ಅಂಧಕಾರದಲ್ಲಿ ಜಗತ್ತು ಮುಳುಗಿರುತ್ತಿತ್ತು. ಕವಿಗಳು ಪ್ರಕೃತಿಯನ್ನು ಕುರಿತು ಬರೆಯುವಾಗ ಮೈಮರೆಯುತ್ತಾರೆ.

ಕುವೆಂಪುರವರ ಸೂರ್ಯಗೀತೆಯಲ್ಲಿ ಆನಂದಮಯ ಈ ಜಗಹೃದಯ..... ಅದ್ಭುತವಾದ ಕವಿತೆಯಾಗಿದೆ. ಕವಿಯು ಈ ಜಗತ್ತಿನ ಎಲ್ಲ ಆಗುಹೋಗುಗಳ ಮೂಲಕ ಶಿವನನ್ನು ಕಾಣುತ್ತಾರೆ ಹಾಗೂ ಶಿವನೆಂದು ಭಾವಿಸುತ್ತಾರೆ. ಹಸುರಿನಿಂದ ನಳನಳಿಸುವ ಹಾಗೂ ಕಂಗೊಳಿಸುತ್ತಿರುವ ಸಹ್ಯಾದ್ರಿ ಬೆಟ್ಟಗಳು, ಅರಣ್ಯಗಳು, ಭೋರ್ಗರೆಯುವ ಸಾಗರ, ನೀಲಿ ಆಕಾಶ, ಧುಮ್ಮಿಕ್ಕುವ ಜಲಧಾರೆ, ಸೋನೆ ಮಳೆ, ಹಕ್ಕಿಗಳ ಚಿಲಿಪಿಲಿ, ಮೋಡಗಳ ಘರ್ಜನೆ, ಹಾಡುವ ಕೋಗಿಲೆಗಳ ಕಂಠ ಸಿರಿ - ಹೀಗೆ ಪ್ರಕೃತಿಯ ಪ್ರತಿ ಸೌಂದರ್ಯದಲ್ಲೂ ಶಿವನ ಹೃದಯವು ವಿಸ್ತರಿಸಿದೆ. ಸೂರ್ಯನ ಬಿಸಿಲು - ಅದು ಬಿಸಿಲಲ್ಲ, ಅದು ಸೂರ್ಯನ ಕೃಪೆ ಎಂದು ತಿಳಿಯಬೇಕು. ಇಲ್ಲದಿದ್ದರೆ ಜೀವರಾಶಿಗಳೆಲ್ಲ ಜೀವಿಸಲು ಸಾಧ್ಯವಿಲ್ಲ. ಉದಯಿಸುವ ರವಿಯು ತೇಜಸ್ಸಿನ ಖಜಾನೆ. ಈ ರವಿಯ ವದನವು ಶಿವನ ವದನವೆಂದು ಕವಿ ವರ್ಣಿಸುತ್ತಾನೆ. ಅಂತಹ ತೇಜಸ್ಸನ್ನು ಮತ್ತು ಕಾಂತಿಯನ್ನು ಶಿವನಿದ್ದಲ್ಲಿ ಮಾತ್ರ ಕಾಣಲು ಸಾಧ್ಯ. ಶಿವನ ಸದನವೇ ರವಿಯ ವದನ ಎಂಬ ಭಾವ ಪ್ರತಿಯೊಬ್ಬರಲ್ಲಿ ತುಂಬಿರಬೇಕು. ಶಿವ ಎಂದರೆ ಸೌಂದರ್ಯ, ಕಾಂತಿ, ಪ್ರಭೆ ಎಂದು ತಿಳಿಸಿದರು.

ಗಮಕಿಗಳಾದ ಶ್ರೀ ಡಿ.ಎಂ. ಸಿದ್ದಲಿಂಗಸ್ವಾಮಿಯವರು ಕಾವ್ಯ ವಾಚಿಸಿದರು. ಸುತ್ತೂರು ಕುಂಬಾರ ಸಮಾಜದ ಭಕ್ತಮಂಡಳಿ ಹಾಗೂ ಸುತ್ತೂರು ಜೆಎಸ್‌ಎಸ್ ಪ್ರೌಢಶಾಲೆ ಶಿಕ್ಷಕವೃಂದ ಸೇವಾರ್ಥ ನೆರವೇರಿಸಿದರು. ಸಾಮೂಹಿಕ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಭಕ್ತಾದಿಗಳು ಮತ್ತು ಆಧ್ಯಾತ್ಮಿಕ ಜಿಜ್ಞಾಸುಗಳು ಪಾಲ್ಗೊಂಡಿದ್ದರು.